ಓ ಎಸ್ ನಂ. 279/2013                                                                                    ಪಿಡಬ್ಲ್ಯೂ : 1

ಈ ಸಾಕ್ಷಿಯನ್ನು ದಿನಾಂಕ : 20.08.2016 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲು ಃ 2 ರಿಂದ 6ನೇ ಪ್ರತಿವಾದಿ ಪರ ವಕೀಲರಿಂದ

ಈ ದಾವೆಯನ್ನು ಹಾಕುವ ಮುನ್ನ ನಾನು 2 ರಿಂದ 6 ನೇ ಪ್ರತಿವಾದಿಯವರಿಗೆ ನೋಟೀಸನ್ನು ನೀಡಿರುವುದಿಲ್ಲ ಎಂದರೆ ಸುಳ್ಳು. ದಾವಾ ಷೆಡ್ಯೂಲ್ ಸ್ವತ್ತು ಅನ್ಯಕ್ರಂತ ಸ್ವತ್ತು ಆಗಿರುವ ಸೊತ್ತು ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲೆ ಮಾಡುವ ಬಗ್ಗೆ ಅಬಿವೃದ್ಧಿ ಪಡಿಸುವ ಬಗ್ಗೆ ಹಾಗೂ ಉಸ್ತುವಾರಿ 7 ನೇ ಪ್ರತಿವಾದಿಗೆ ಬರುತ್ತದೆ ಎಂದರೆ ಸರಿ. ಪ್ರತಿವಾದಿ 2 ರಿರದ 6 ಪ್ರತಿವಾದಿಗಳಿಂದ ದಾವಾ ಷೆಡ್ಯೊಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆ ಆಗಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ನಾನು 2 ರಿಂದ 6 ಪ್ರತಿವಾದಿಗಳ ವಿರುದ್ಧ ಯಾವುದೇ ಪರಿಹಾರವನ್ನು ಕೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಾಂಪೌಂಡನ್ನು ತೆರವು ಮಾಡಿಸಿ ಕೊಡಬೇಕಾಗಿ ಪರಿಹಾರ ಕೇಳಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಕಾಂಪೌಂಡನ್ನು ತೆರವು ಮಾಡಿಸುವ ಬಗ್ಗೆ 7ನೇ ಪ್ರತಿವಾದಿ ವಿರುದ್ಧ ಪರಿಹಾರ ಕೇಳಿರುತ್ತೇನೆ ಎಂದರೆ ಸರಿ. ಈ ದಾವೆಗೂ 2 ರಿಂದ 6 ನೇ ಪ್ರತಿವಾದಿಯವರಿಗೂ ಯಾವುದೇ ಸಂಬಂಧಿ ಇಲ್ಲದೆ ಇದ್ದರೂ ಕೂಡ ವಿನಾಕಾರಣ ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುತ್ತೇನೆ ಒಂದರೆ ಸುಳ್ಳು .

ಮರು ವಿಚಾರಣೆ ಃ ಇಲ್ಲ.

( ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು).

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ,
ಓ ಹೇ ಕೇ ಸ ಇದೆ

(ಎನ್.ಬಿ.ಜಯಲಕ್ಷ್ಮಿ)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಕೊಳ್ಳೇಗಾಲ.